**ಓ.ಎಸ್. ನಂಃ 482/2017**

**ಪಿ.ಡಬ್ಲ್ಯೂಃ 4**

**ದಿನಾಂಕ 07.01.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ.ಎಸ್.ಎಸ್.ಜಿ.ವಕೀಲರಿಂದಃ</u>**

1. ವಾದಿ ಮತ್ತು ಪ್ರತಿವಾದಿ ಇಬರಿಬ್ಬರು ನನ್ನ ಅತ್ತಿಗೆಯಂದಿರು. ವಾದಿಯ ಗಂಡನ ಹಿಸ್ಸೆಗೆ ಒಂದು ಪಂಪ್ ಸೆಟ್, ನಾಲೆ ಗದ್ದೆ ಹಾಗೂ ನನ್ನ ತಾಯಿಯ ಹೆಸರಿನಲ್ಲಿದ್ದ ಬೋವಿ ಜನಾಂಗದ ಜನರ ಜಮೀನು ಹೋಗಿರುತ್ತದೆ. ನಾಟನಹಳ್ಳಿ ಗ್ರಾಮದ ಸರ್ವೇ ನಂಬರ್ 57 ರಲ್ಲಿ 1 ಎಕರೆ 15 ಗುಂಟೆ ವಾದಿಯ ಗಂಡನ ಹಿಸ್ಸೆಗೆ ಹೋಗಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸರ್ವೇ ನಂಬರ್ 57 ರಲ್ಲಿ ವಾದಿಯ ಗಂಡನ ಹಿಸ್ಸೆಗೆ ಕೇವಲ 23 ಗುಂಟೆ ಜಮೀನು ಮಾತ್ರ ಹೋಗಿರುತ್ತದೆ ಎಂದು ಸ್ವತಃ ನುಡಿದಿರುತ್ತಾರೆ.

2. ವಾದಿಯ ಗಂಡನ ಹಿಸ್ಸೆಗೆ ಹೋಗಿದ್ದ ಸರ್ವೇ ನಂಬರ್ 57/1 ರ 1 ಎಕರೆ 15 ಗುಂಟೆ ಜಮೀನಿನ ಪೈಕಿ 15 ಗುಂಟೆ ಜಮೀನನ್ನು 1996 ರಲ್ಲಿ ವಾದಿಯ ಗಂಡ ಬಿ.ವೈ ರಾಮಲಿಂಗೇಗೌಡ ಬಿನ್ ಯೋಗೇಗೌಡರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ 15 ಗುಂಟೆ ಜಮೀನು ಮಾರಾಟ ಮಾಡಿದ ನಂತರದ ಉಳಿದ 1 ಎಕರೆ ಜಮೀನು 25 ಗುಂಟೆ ಸರ್ವೇ ನಂಬರ್ 57/1 ರಲ್ಲಿ ಹಾಗೂ 15 ಗುಂಟೆ ಸರ್ವೇ ನಂಬರ್ 57/3 ರಲ್ಲಿ ಪೋಡಾಗಿ ಪ್ರತ್ಯೇಕವಾಗಿರುತ್ತದೆ ಎಂದರೆ ಸರಿ. ಸರ್ವೇ ನಂಬರ್ 57/1 ಮತ್ತು 57/3 ರಲ್ಲಿ ಇದ್ದ ಸದರಿ 1 ಎಕರೆ ಜಮೀನನ್ನು ದಿನಾಂಕ 26.07.1999 ರಂದು ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸರ್ವೇ ನಂಬರ್ 57 ರಲ್ಲಿ ವಾದಿಯ ಗಂಡನ ಹಿಸ್ಸೆಗೆ ಹೋಗಿದ್ದ ಎಲ್ಲಾ ಆಸ್ತಿಗಳನ್ನು ಮೇಲೆ ಹೇಳಿದ ರೀತಿಯಲ್ಲಿ ಮಾರಾಟ ಮಾಡಿದ ನಂತರ ಸದರಿ ಸರ್ವೇ ನಂಬರಿನಲ್ಲಿ ವಾದಿಗೆ

ಯಾವುದೇ ಆಸ್ತಿ ಉಳಿದಿರುವುದಿಲ್ಲ ಎಂದರೆ ಸರಿ. ವಾದಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**